# ದಾವಣಗೆರೆ ವಿಶ್ವವಿದ್ಯಾನಿಲಯ
# DAVANGERE UNIVERSITY

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ಶಿವಗಂಗೋತ್ರಿ, ದಾವಣಗೆರೆ–577007.
ದೂ : 08192-208420/208104.

Office of the Registrar (Evaluation),
Shivagangothri, Davanagere -577007.
Ph No. 08192-208420/208104.

**Email:** examination@davangereuniversity.ac.in


**ಸಂಖ್ಯೆ:ದಾವಿ:ಪವಿ:ಬಿ.ಇಡಿ:18:2025–26/322** **ದಿನಾಂಕ:08.05.2025**

## –: ಪ್ರಕಟಣೆ :–

ವಿಷಯ : ಮೇ/ಜೂನ್–2025ರಲ್ಲಿ ನಡೆಯುವ ಬಿ.ಇಡಿ., ಪದವಿ ಪರೀಕ್ಷೆಗಳಿಗೆ 2016–17ನೇ ಸಾಲಿನಿಂದ ದ್ವಿಗುಣ ಅವಧಿ ಪೂರೈಸಿರುವ CBCS ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿರುವ ಕುರಿತು.

ಉಲ್ಲೇಖ :
1. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ:21.01.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.05.2025

********

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ., ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಮೇ/ಜೂನ್–2025ರಲ್ಲಿ ನಡೆಯುವ ಬಿ.ಇಡಿ., ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, 2016–17ನೇ ಶೈಕ್ಷಣಿಕ ಸಾಲಿನಿಂದ ದ್ವಿಗುಣ ಅವಧಿ **(Double the Duration)** ಪೂರೈಸಿರುವ CBCS ಪಠ್ಯಕ್ರಮದ ವಿದ್ಯಾರ್ಥಿಗಳು ತಮ್ಮ ಪದವಿಯನ್ನು ಪೂರ್ಣಗೊಳಿಸಿ ಯಾವುದಾದರೂ ಸೆಮಿಸ್ಟರ್‌ಗಳ ವಿಷಯಗಳಲ್ಲಿ ಬಾಕಿ ಉಳಿಸಿಕೊಂಡಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ **"Online"** ಮುಖಾಂತರ **"ವಿಶೇಷ ಪರೀಕ್ಷಾ ಶುಲ್ಕ"** ದೊಂದಿಗೆ 1 ರಿಂದ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ಪ್ರಕಟಣೆ ಹೊರಡಿಸಲಾಗಿದೆ. ಸದರಿ ಅವಕಾಶವು ಅಂತಿಮವಾಗಿರುವುದರಿಂದ ಈ ವಿಷಯವನ್ನು ಕಡ್ಡಾಯವಾಗಿ ಸಂಬಂಧಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

**ವಿವರಗಳು ಈ ಕೆಳಕಂಡಂತೆ ಇರುತ್ತವೆ.**

| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು | | |
|---|---|---|
| 1) | ವಿಳಂಬ ಶುಲ್ಕವಿಲ್ಲದೆ | 08.05.2025 ರಿಂದ 17.05.2025 |
| 2) | ವಿಳಂಬ ಶುಲ್ಕ ರೂ.120=00 ರಂತೆ (ಪ್ರತಿ ಸೆಮಿಸ್ಟರ್‌ಗೆ) | 18.05.2025 ರಿಂದ 19.05.2025 |
| 3) | ವಿಳಂಬ ಶುಲ್ಕ ರೂ.660=00 ರಂತೆ (ಪ್ರತಿ ಸೆಮಿಸ್ಟರ್‌ಗೆ) | 20.05.2025 |

**ಶುಲ್ಕದ ವಿವರಗಳು**
**ಬಿ.ಇಡಿ., ವಿದ್ಯಾರ್ಥಿಗಳಿಗೆ**

| ಕ್ರ. ಸಂ. | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಶುಲ್ಕ | **ರೂ. 110.00** |
| 2 | ಪ್ರತಿ ಸೆಮಿಸ್ಟರ್ (ಪೂರ್ಣ ಪರೀಕ್ಷೆಗೆ) | **ಪರೀಕ್ಷಾ ಶುಲ್ಕ ರೂ. 1,166.00**<br>**ಅಂಕಪಟ್ಟಿ ಶುಲ್ಕ ರೂ. 264.00**<br>------<br>**ಒಟ್ಟು ಶುಲ್ಕ ರೂ. 1,430.00** |
| 3 | ಪ್ರಾಯೋಗಿಕ ಪರೀಕ್ಷೆಗೆ (4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಮಾತ್ರ) | **ರೂ. 500.00** |
| 4 | ಪ್ರತಿ ಪತ್ರಿಕೆಗೆ (ಥಿಯರಿ ಪರೀಕ್ಷೆ) (ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | **ರೂ. 242.00** |
| 5 | ಪ್ರಾಯೋಗಿಕ ಪರೀಕ್ಷೆಗೆ (ಪ್ರತಿ ಪತ್ರಿಕೆಗೆ) (ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | **ರೂ. 363.00** |
| 6 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ – ಅಂಕಪಟ್ಟಿ ಶುಲ್ಕ | **ರೂ. 264.00** |

**–: ವಿಶೇಷ ಸೂಚನೆ :–**

2016–17ನೇ ಶೈಕ್ಷಣಿಕ ಸಾಲಿನಿಂದ ದ್ವಿಗುಣ ಅವಧಿ **(Double the Duration)** ಪೂರೈಸಿರುವ CBCS ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಪ್ರಸ್ತುತ ಪ್ರಕಟಣೆಯಲ್ಲಿ ನಿಗದಿ ಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ಸೆಮಿಸ್ಟರ್‌ಗೆ ವಿಶೇಷ ಶುಲ್ಕ ರೂ:5,000/– ಗಳನ್ನು ನಿಗದಿಪಡಿಸಲಾಗಿದೆ.

## –: ವಿದ್ಯಾರ್ಥಿಗಳಿಗೆ ಸೂಚನೆ :–

1. ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು studentportal.universitysolutions.in ನಲ್ಲಿ login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
3. ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡುವ ವಿಧಾನ.
   - **ವಿದ್ಯಾರ್ಥಿಯು Web Portal ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.**
4. ವಿದ್ಯಾರ್ಥಿಗಳು ತಮ್ಮ Web Portal ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.

**ವಿಶೇಷ ಸೂಚನೆ: –**

1. ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಹಾಗೂ ಎರಡು ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮಾರುಪಾವತಿಗೆ (No Refund) ಅವಕಾಶ ಇರುವುದಿಲ್ಲ.
2. ಪರೀಕ್ಷೆ ಬರೆಯಲು ವಿಶ್ವವಿದ್ಯಾನಿಲಯವು ನೀಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ (ದಾವಣಗೆರೆ / ಚಿತ್ರದುರ್ಗ) ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆಯತಕ್ಕದ್ದು ಹಾಗೂ ಯಾವುದೆ ಬದಲಾವಣೆಗೆ ಅವಕಾಶ ಇರುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 7483283068 ಸಂಪರ್ಕಿಸಬಹುದು.**

ಕುಲಸಚಿವ (ಪರೀಕ್ಷಾಂಗ)
**ಕುಲಸಚಿವರು (ಪರೀಕ್ಷಾಂಗ)**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ, ದಾವಣಗೆರೆ - 577 007**

**ಗೆ,**
ವಿಶ್ವವಿದ್ಯಾನಿಲಯಕ್ಕೊಳಪಡುವ ಎಲ್ಲಾ ಸ್ನಾತಕ ಬಿ.ಇಡಿ., ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ವಿದ್ಯಾರ್ಥಿಗಳ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ:**
1. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ
2. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸಿಸ್, ದಾವಣಗೆರೆ / ಬೆಂಗಳೂರು.
3. ಕಛೇರಿ ಪ್ರತಿ.